**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 18-05-2026 ರಂದು ಪ್ರಮಾಣ ಮಾಡಿಸಲಾಯಿತು**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಟಿ ಓ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ದೂರನ್ನು ಬರೆಯಲು ನಮ್ಮ ಹೆಡ್ ಆಫೀಸನವರು ಮಾಹಿತಿ ನೀಡಿದ್ದಾರೆ. ದೂರನ್ನು ನಾನೆ ಕೊಟ್ಟಿರುತ್ತೇನೆ. ನಮ್ಮ ಬ್ಯಾಂಕಿನ ಕಾನೂನು ಸಲಹೆಗಾರರ ಮೂಲಕ ದೂರು ದಾಖಲಿಸಿದ್ದೇನೆ. ದೂರನ್ನು ನಾನು ಓದಿದ್ದೇನೆ. ದೂರಿನಲ್ಲಿ ಬರೆದ ಎಲ್ಲಾ ವಿಷಯಗಳು ನನಗೆ ಗೊತ್ತಿದೆ. ನಮ್ಮ ಕಾನೂನು ಸಲಹೆಗಾರರ ಕಚೇರಿ ವಿಳಾಸ ಈಗ ನೆನಪಿಲ್ಲ. 2017 ರಲ್ಲಿ ದೂರು ದಾಖಲಿಸಿದ್ದೇನೆ. ದಿನಾಂಕ ಹೇಳಲು ಬರುವುದಿಲ್ಲ. ಖಾಸಗಿ ದೂರು ದಾಖಲಿಸಿದ ನಂತರ ಪೋಲೀಸರು ಪ್ರಥಮ ವರ್ತಮಾನ ವರದಿ ದಾಖಲಿಸಿಕೊಂಡಿದ್ದಾರೆ. ನಾನು ದೂರು ಸಲ್ಲಿಸುವ ಮುಂಚೆ ಪೋಲೀಸ ಠಾಣೆಗೆ ಹೋಗಿದ್ದೆ ಆದರೆ ಪೋಲೀಸರು ದೂರನ್ನು ದಾಖಲಿಸಿಕೊಳ್ಳಲಿಲ್ಲ ಆದ್ದರಿಂದ ಖಾಸಗಿ ದೂರು ಸಲ್ಲಿಸಿದ್ದೇನೆ.

ದೂರಿನಲ್ಲಿ ನಾನು ರಾಘವೇಂದ್ರ, ನಿಂಗಪ್ಪ ಸತ್ಯಪ್ಪನವರ, ರವಿ ಪಾಟೀಲ ಇವರ ವಿರುದ್ಧ ಸಲ್ಲಿಸಿದ್ದೇನೆ ಬೇರೆಯವರ ಬಗ್ಗೆ ನೆನಪಿಲ್ಲ. ನಾನು ಯಾರ ಯಾರ ವಿರುದ್ಧ ದೂರು ಸಲ್ಲಿಸಿದ್ದೇನೆ ಎನ್ನುವದು ಈಗ ನೆನಪಿಲ್ಲ. ಹಿರಿಯ ಅಧಿಕಾರಿಗಳು ಹೇಳಿದ್ದರಿಂದ ನಾನು ದೂರು ದಾಖಲಿಸಿದ್ದೇನೆ ಅಂದರೆ ನಿಜ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ನಮ್ಮ ಹಿರಿಯ ಅಧಿಕಾರಿಗಳು ನಮ್ಮ ಕಾನೂನು ಸಲಹೆಗಾರನನ್ನು ಭೇಟಿ ಆಗಲು ನನ್ನನ್ನು ಕಳುಹಿಸಿದ್ದರು. ದೂರು ಸಲ್ಲಿಸುವ ಸಮಯದಲ್ಲಿ ನಾನು ಪೂರ್ತಿ ಮಾಹಿತಿ ನೀಡಿದ್ದೇನೆ ಆ ಪ್ರಕಾರ ದೂರು ತಯಾರಿಸಿ ದಾಖಲಿಸಿದ್ದಾರೆ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಕಾನೂನು ಸಲಹೆಗಾರರೊಂದಿಗೆ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ವಾಹನ ಸಾಲ ಮಂಜೂರು ಮಾಡುವಾಗ ಕೋಟೇಷನ್ ಹಾಜರ ಪಡಿಸಿದ ನಂತರ ಅದನ್ನು ಪರಿಶೀಲಿಸಿ ಅದು ಯಾರಿಗೆ ಸಂಬಂಧಿಸಿದ್ದು ಎಂದು ಪರಿಶೀಲಿಸಲಾಗುತ್ತದೆ ಅಂದರೆ ನಿಜ. ವಾಹನ ಸಾಲ ಮಂಜೂರು ಮಾಡುವಾಗ ಸಾಲಗಾರ ಸಾಲ ಪಡೆದುಕೊಳ್ಳಲು ಸೂಕ್ತ ವ್ಯಕ್ತಿ ಎಂದು ಪರಿಶೀಲನೆ ಮಾಡುತ್ತೇವೆ ಅಂದರೆ ನಿಜ. ಕೋಟೇಷನ ವಿವರಗಳನ್ನು ಪೂರ್ಣ ಪರಿಶೀಲನೆ ಮಾಡುತ್ತೇವೆ ಅಂದರೆ ನಿಜ. ಸಾಲಗಾರನ ದಾಖಲೆಗಳನ್ನು ಕೂಡಾ ಪರಶೀಲನೆ ಮಾಡುತ್ತೇವೆ ಅಂದರೆ ನಿಜ. ಸಾಲಗಾರನ ಬಗ್ಗೆ ಖುದ್ದು ಪರಿಶೀಲನೆ ಮಾಡುತ್ತೇವೆ ಅಂದರೆ ನಿಜ. ಸಾಲಗಾರನ ಮನೆಗೆ ಭೇಟಿ ನೀಡಿ ಪೋಟೋ ವಗೈರೆ ಪಡೆದುಕೊಳ್ಳುತ್ತೇವೆ ಅಂದರೆ ನಿಜ. ಈ ಪ್ರಕರಣದಲ್ಲಿ ಸಾಲಗಾರನ ಕುರಿತಾದ ವಯಕ್ತಿಕ ವಿವರ, ಭೇಟಿಯ ಕುರಿತಾದ ಯಾವುದೆ ದಾಖಲೆಗಳು ಇರುವುದಿಲ್ಲ ಅಂದರೆ ಸಾಕ್ಷಿ ಯಾವುದೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಅನ್ನುತ್ತಾರೆ. ಸಾಲಗಾರನಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ದೂರಿನೊಂದಿಗೆ ನಾನು ಹಾಜರ ಪಡಿಸಿಲ್ಲ ಅಂದರೆ ಸಾಕ್ಷಿ ಲಭ್ಯ ಇರುವ ಎಲ್ಲಾ ದಾಖಲೆಗಳನ್ನು ಹಾಜರ ಪಡಿಸಿದ್ದೇನೆ ಅನ್ನುತ್ತಾರೆ.

ನಮ್ಮ ಬ್ಯಾಂಕ ವ್ಯಾಪ್ತಿಯಲ್ಲಿ ವಾಸವಾಗಿರುವ ವ್ಯಕ್ತಿಗಳಿಗೆ ಮಾತ್ರ ಸಾಲ ಮಂಜೂರು ಮಾಡಬೇಕಾಗುತ್ತದೆ ಅಂದರೆ ನಿಜ. ಕ್ಷೇತ್ರ ವ್ಯಾಪ್ತಿ ಮೀರಿ ಸಾಲ ಮಂಜೂರು ಮಾಡಲು ಅವಕಾಶ ಇಲ್ಲ ಅಂದರೆ ಸರಿಯಲ್ಲ. ಸಾಲ ಮಂಜೂರು ವಿಚಾರ ಸಾಲದ ವ್ಯವಹಾರಕ್ಕೆ ಸಂಬಂಧಿಸಿರುತ್ತದೆ. ನಮ್ಮ ಕ್ಷೇತ್ರ ವ್ಯಾಪ್ತಿಯನ್ನು ಹೊರತು ಪಡಿಸಿದ ವ್ಯಕ್ತಿಗಳಿಗೆ ಸಾಲ ಮಂಜೂರು ಮಾಡಬಹುದು ಎನ್ನುವ ಕುರಿತು ದಾಖಲೆ ಹಾಜರ ಪಡಿಸಿಲ್ಲ.

ಈ ಪ್ರಕರಣದಲ್ಲಿ ಕೋಟೇಷನ ನೀಡಿದ ಕಂಪನಿಯಿಂದ ವಿವರ ಪಡೆದುಕೊಂಡಿರುವುದು ನನಗೆ ಗೊತ್ತಿಲ್ಲ. ನಾನು ದೂರು ಸಲ್ಲಿಸುವ ಮುಂಚೆ ಶೋರೂಂ ನಿಂದ ಮಾಹಿತಿ ಕೋರಿದ್ದೇನೆ ಆದರೆ ಅವರು ಯಾವುದೆ ಮಾಹಿತಿ ನೀಡಿಲ್ಲ. ನಾನು ಮಾಹಿತಿ ಕೋರಿದ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ಸಾಲ ನೀಡುವಾಗ ಸಾಲಗಾರನ ಸಿಬಿಲ್ ವಿವರಗಳನ್ನು ಪರಿಶೀಲನೆ ಮಾಡುತ್ತೇವೆ ಅಂದರೆ ನಿಜ. 2017 ರಲ್ಲಿ ಒಬ್ಬ ವ್ಯಕ್ತಿ ಸಾಲ ಪಡೆಯಬೇಕಾದರೆ ಎಷ್ಟು ಸಿಬಿಲ್ ಸ್ಕೋರ ಹೊಂದಿರಬೇಕು ಎನ್ನುವದು ನನಗೆ ನೆನಪಿಲ್ಲ. ಒಬ್ಬ ಸಾಲಗಾರ ಸಾಲ ಕೋರಿ ಅರ್ಜಿ ಸಲ್ಲಿಸಿದಾಗ ಆತನಿಗೆ ಸಂಬಂಧಿಸಿದ ಎಲ್ಲಾ ವಿವರಗಳು ನಮ್ಮ ಬ್ಯಾಂಕಿನಲ್ಲಿ ಲಭ್ಯ ಇರುತ್ತವೆ ಅಂದರೆ ನಿಜ. ಬೇರೆ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿದ್ದರೆ ಅದು ಕೂಡಾ ಗೊತ್ತಾಗುತ್ತದೆ ಅಂದರೆ ನಿಜ. ಸಾಲ ಮರುಪಾವತಿ ಮಾಡುತ್ತಾನೆ ಎನ್ನುವ ಕುರಿತು ಪರಿಶೀಲನೆ ಮಾಡುತ್ತೇವೆ ಅಂದರೆ ನಿಜ.

ರಾಘವೇಂದ್ರ ಪಾಟೀಲ ಇವರು ಯಾವ ದಿನಾಂಕದಂದು ಸಾಲ ಕೋರಿ ಅರ್ಜಿ ಸಲ್ಲಿಸಿದ್ದರು ಎನ್ನುವದರ ಬಗ್ಗೆ ದೂರಿನಲ್ಲಿ ನಮೂದಿಸಿರುವುದು ನೆನಪಿಲ್ಲ. ಸಾಲ ಕೋರಿ ಅರ್ಜಿ ಸಲ್ಲಿಸಿದಾಗ ನಿಗಧಿತ ನಮೂನೆಯಲ್ಲಿ ವಿವರ ಪಡೆದುಕೊಳ್ಳುತ್ತೇವೆ. ರಾಘವೇಂದ್ರ ಪಾಟೀಲ ಇವರು ಸ್ವಿಫ್ಟ ಡಿಜೈರ ವಾಹನ ಖರೀದಿಸುವ ಸಲುವಾಗಿ ಸಾಲದ ಅರ್ಜಿ ಸಲ್ಲಿಸಿದ್ದರು. ಯಾವ ಮಾಡಲ್ ಖರೀದಿಸುವ ಸಲುವಾಗಿ ಅರ್ಜಿ ಸಲ್ಲಿಸಿದ್ದರು ಈಗ ನೆನಪಿಲ್ಲ. ಕೋಟೇಷನ್ ಪರೀಶಿಲಿಸಿದ ನಂತರ ಎಷ್ಟು ಸಾಲ ಮಂಜೂರು ಮಾಡಬೇಕು ಎನ್ನುವ ಬಗ್ಗೆ ನಮ್ಮಲ್ಲಿ ಒಂದು ಮಾರ್ಗಸೂಚಿ ಇರುತ್ತದೆ ಅಂದರೆ ನಿಜ. ದೂರಿನಲ್ಲಿ ವಾಹನ ಖರೀದಿಸುವ ಸಲುವಾಗಿ ಎಷ್ಟು ಮೊತ್ತದ ಸಾಲ ಕೇಳಿದ್ದರು ಎನ್ನುವ ಬಗ್ಗೆ ನಮೂದಿಸಿರುವುದು ನೆನಪಿಲ್ಲ. ರಾಘವೇಂದ್ರ ಪಾಟೀಲ ಇವರು ಯಾವ ದಿನಾಂಕದಂದು ಖಾತೆ ತೆಗೆದಿದ್ದಾರೆ ಎನ್ನುವದು ನೆನಪಿಲ್ಲ. ಈ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ರಾಘವೇಂದ್ರ ಪಾಟೀಲ ಇವರು ಕೆಲಗೇರಿ ಧಾರವಾಡದವರು ಎನ್ನುವ ಕುರಿತು ದಾಖಲೆ ಸಲ್ಲಿಸಿರುವುದು ನೆನಪಿಲ್ಲ. ಸದರಿಯವರು ಧಾರವಾಡ ತಾಲೂಕಿನವರು ಆಗಿರುವುದರಿಂದ ಅವರಿಗೆ ಕಲಘಟಗಿಯಲ್ಲಿ ಸಾಲ ಪಡೆದುಕೊಳ್ಳುವ ಪರಿಸ್ಥಿತಿ ಇರಲಿಲ್ಲ ಅಂದರೆ ಸರಿಯಲ್ಲ. ಸಾಲದ ಅರ್ಜಿಯ ಜೊತೆಗೆ ಹಾಜರ ಪಡಿಸಿದ ದಾಖಲೆಗಳನ್ನು ನಾನು ಪರಿಶೀಲಿಸಿರುವುದು ಈಗ ನೆನಪಿಲ್ಲ. ಸಾಲದ ದಾಖಲೆಗಳನ್ನು ಚಾರ್ಟ್‌ರ್ಡ ಅಕೌಂಟೆಂಟ್ ರವರು ಪರಿಶೀಲನೆ ಮಾಡಿರುವುದು ನೆನಪಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಹಿರಿಯ ಅಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ಪೋಲೀಸರ ಮುಂದೆ ಹಾಜರ ಪಡಿಸಿದ ದಾಖಲೆಗಳ ಬಗ್ಗೆ ಗೊತ್ತಿದೆ ಈಗ ವಿವರ ಹೇಳಲು ಬರುವುದಿಲ್ಲ. ಖಾಸಗಿ ದೂರಿನ ಜೊತೆಗೆ ಹಾಜರ ಪಡಿಸಿದ ದಾಖಲೆಗಳ ಬಗ್ಗೆ ಈಗ ನೆನಪಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸಾಲ ಕೋರಿ ಅರ್ಜಿ ಸಲ್ಲಿಸಿದಾಗ ಎಷ್ಟು ದಿನಗಳಲ್ಲಿ ಸಾಲ ಮಂಜೂರು ಮಾಡಲಾಗುತ್ತದೆ ಅಂದರೆ ಸಾಕ್ಷಿ ಬೇರೆ ಬೇರೆ ಸಾಲಕ್ಕೆ ಬೇರೆ ಬೇರೆ ದಿನಗಳ ಅವಧಿ ಇರುತ್ತದೆ ಅನ್ನುತ್ತಾರೆ. ವಾಹನ ಸಾಲವನ್ನು ಎಷ್ಟು ದಿನಗಳಲ್ಲಿ ಮಂಜೂರು ಮಾಡುತ್ತಾರೆ ಎನ್ನುವದು ಈಗ ನೆನಪಿಲ್ಲ. ಸಾಮಾನ್ಯವಾಗಿ 2-3 ದಿನಗಳಲ್ಲಿ ಸಾಲ ಮಂಜೂರು ಮಾಡಬಹುದು. ಸಾಮಾನ್ಯವಾಗಿ ಸಾಲ ನೀಡುವಾಗ ಜಾಮೀನುದಾರನ ಅವಶ್ಯಕತೆ ಇರುತ್ತದೆ ಅಂದರೆ ಸಾಕ್ಷಿ ಅದು ಸಾಲದ ಮೇಲೆ ಅವಲಂಭಿಸಿರುತ್ತದೆ ಅನ್ನುತ್ತಾರೆ. ಈ ಪ್ರಕರಣದಲ್ಲಿ ನೀಡಿದ ಸಾಲಕ್ಕೆ ಜಾಮೀನುದಾರನನ್ನು ಪಡೆದುಕೊಂಡಿದ್ದಾರೆ ಎನ್ನುವ ಬಗ್ಗೆ ಈಗ ನೆನಪಿಲ್ಲ. ಒಬ್ಬ ವ್ಯಕ್ತಿ ಎಷ್ಟು ಜನರಿಗೆ ಜಾಮೀನುದಾರ ಆಗಬೇಕು ಎನ್ನುವದರ ಬಗ್ಗೆ ನಿರ್ದಿಷ್ಟವಾದ ಮಾರ್ಗದರ್ಶಿ ನಿಯಮಗಳು ಇರುವುದಿಲ್ಲ. ರಾಘವೇಂದ್ರ ಪಾಟೀಲ ಇವರು ಯಾವ ಕಂಪನಿಯ ಶೋರೂಂ ಕೋಟೇಷನ್ ಕೊಟ್ಟಿದ್ದರು ಎನ್ನುವದು ಈಗ ನೆನಪಿಲ್ಲ. ದೂರಿನೊಂದಿಗೆ ಕೋಟೇಷನ್ ಹಾಜರ ಪಡಿಸಿದ್ದೇನೆ. ಕೋಟೇಷನ್ ಯಾವ ದಿನಾಂಕದಂದು ಕೊಟ್ಟಿದ್ದಾರೆ ಎನ್ನುವದು ಈಗ ನೆನಪಿಲ್ಲ. ಈ ಪ್ರಕರಣದಲ್ಲಿ ಸಾಲಕ್ಕೆ ಜಾಮೀನುದಾರರನ್ನು ಪಡೆದುಕೊಂಡಿರುವುದು ನೆನಪಿಲ್ಲ. ದೂರು ದಾಖಲಿಸಲು ಸೂಚನೆ ನೀಡಿದ ಅಧಿಕಾರಿ ಈಶ್ವರ ಗಂಜಿ, ಸದರಿಯವರು ನಿವೃತ್ತರಾಗಿದ್ದಾರೆ. ಸದರಿಯವರು ಆಗ ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸದರಿಯವರು ದೂರು ದಾಖಲಿಸಲು ಹೇಳುವವರಿಗೆ ನನಗೆ ಬ್ಯಾಂಕಿನಲ್ಲಿ ಆದ ಅವ್ಯವಹಾರದ ಬಗ್ಗೆ ಗೊತ್ತಿರಲಿಲ್ಲ ಅಂದರೆ ಸರಿಯಲ್ಲ.

ನಾನು ಬ್ಯಾಂಕಿನ ಪ್ರಭಾರ ವಹಿಸಿಕೊಂಡ 2 ತಿಂಗಳಲ್ಲಿ ಸಾಲದ ಅವ್ಯವಹಾರ ಕುರಿತು ಗೊತ್ತಾಗಿರುತ್ತದೆ. 2017 ರಲ್ಲಿ ವಾಹನ ಸಾಲದ ಬಡ್ಡಿದರ ಎಷ್ಟು ಇತ್ತು ನನಗೆ ಗೊತ್ತಿಲ್ಲ. ರಾಘವೇಂದ್ರ ಪಾಟೀಲ ಇವರಿಗೆ ಮಂಜೂರಾದ ಸಾಲದ ಮೊತ್ತದ ಬಗ್ಗೆ ದೂರಿನಲ್ಲಿ ನಮೂದಿಸಿದ್ದೇನೆ ಆದರೆ ಈಗ ನೆನಪಿಲ್ಲ. ಸಾಲದ ಕರಾರು ಪತ್ರವನ್ನು ಹಾಜರ ಪಡಿಸಿದ್ದೇನೆ. ಸಾಲದ ಮಂಜಾರು ಮಾಡುವ ಸಮಯದಲ್ಲಿ ಸಾಲ ಮಂಜೂರು ಮಾಡಿದ ಮೊತ್ತ, ಪ್ರತಿ ತಿಂಗಳು ಪಾವತಿಸಬೇಕಾದ ಕಂತು, ಇತ್ಯಾದಿ ವಿವರಗಳ ಬಗ್ಗೆ ಸಾಲಗಾರರಿಗೆ ಮಾಹಿತಿ ನೀಡುತ್ತೇವೆ. ಸಾಲ ಮಂಜೂರು ಮಾಡಿದ ನಂತರ ಅದನ್ನು ಅಡಮಾನ ಮಾಡುತ್ತೇವೆ ಅಂದರೆ ನಿಜ. ಸಾಲ ಚುಕ್ತಾ ಆಗುವವರಗೆ ಅದನ್ನು ತೆಗೆದುಹಾಕುವುದಿಲ್ಲ ಮೊತ್ತವನ್ನು ದರವನ್ನು ಅಂದರೆ ನಿಜ. ನಾವು ವಾಹನಕ್ಕೆ ನಿಗದಿ ಪಡಿಸಿದ ಪೂರ್ತಿ ಮೊತ್ತವನ್ನು ಮಂಜೂರು ಮಾಡುವುದಿಲ್ಲ ಅಂದರೆ ನಿಜ. ಡೌನ ಪೇಮೆಂಟ್ ಪಾವತಿ ಮಾಡಿದ ನಂತರ ಡಿಡಿ ಚಲನ್ ನೀಡುತ್ತೇವೆ ಅಂದರೆ ನಿಜ. ಸಾಲಗಾರ ಡೌನ್ ಪೇಮೆಂಟ್ ಪಾವತಿಸಿದ ಬಗ್ಗೆ ನೆನಪಿಲ್ಲ. ದೂರು ದಾಖಲಿಸುವಾಗ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಆದರೆ ಅದನ್ನು ಹಾಜರ ಪಡಿಸಿರುವುದು ಈಗ ನೆನಪಿಲ್ಲ. ಸಾಲದ ದಾಖಲೆಗಳನ್ನು ನಾವು ಶೋರೋಂಗೆ ಕಳುಹಿಸುವುದಿಲ್ಲ. ಶೋರೊಂರವರಿಗೆ ಬ್ಯಾಂಕಿನಿಂದ ಡಿಡಿ ನೀಡಿದ ಬಗ್ಗೆ ಸದರಿಯವರು ರಶೀದಿ ನೀಡಿದ ದಾಖಲೆಗಳು ಇರುವುದಿಲ್ಲ. ಶೋರೋಂ ರವರ ಜೊತೆಗೆ

ಹಿಂದಿನ ಶಾಖಾ ವ್ಯವಸ್ಥಾಪಕರು ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಬೇರೆಯವರ ಹೆಸರಿನಲ್ಲಿ ಸಾಲ ಕೋರಿ ಅರ್ಜಿ ಸಲ್ಲಿಸಲು ಬರುವುದಿಲ್ಲ. ಸಾಲದ ಅವ್ಯವಹಾರ ಗೊತ್ತಾದ ನಂತರ ನಾನು ಸಾಲಗಾರ ಹಾಗೂ ಜಾಮೀನುದಾರನಿಗೆ ನೋಟೀಸ ಕೊಟ್ಟಿರುತ್ತೇನೆ. ನನಗಿಂತ ಮುಂಚೆ ಬ್ಯಾಂಕ ಶಾಖೆಯ ವ್ಯವಸ್ಥಾಪಕರಾಗಿ ಬೇರೆಯವರು ಬಂದಿದ್ದರು ಆದರೆ ಅವರು ಕೆಲವು ಸಮಯದವರೆಗೆ ತಾತ್ಕಾಲಿಕವಾಗಿ ಮಾತ್ರ ಇದ್ದರು. ಸದರಿಯವರು ಕೆಲವು ಸಮಯದವರಿಗೆ ಮಾತ್ರ ಅಧಿಕಾರಿ ವಹಿಸಿಕೊಂಡಿದ್ದರಿಂದ ಅಧಿಕಾರ ಹಸ್ತಾಂತರದಲ್ಲಿ ಸಮಯ ಹೋಗಿದ್ದು ಯಾವುದೆ ಕ್ರಮ ಕೈಗೊಂಡಿಲ್ಲ. ನಾನು ಪ್ರಭಾರ ವಹಿಸಿಕೊಳ್ಳುವ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನನ್ನ ಹಿಂದಿನ ಅಧಿಕಾರಿ ತಾತ್ಕಾಲಿಕ ಅಧಿಕಾರಿ ಆಗಿದ್ದರಿಂದ ಅವರು ಯಾವುದೆ ಕ್ರಮ ಜರುಗಿಸಿಲ್ಲ.

ಕಾರು ಖರೀದಿಸಿದ ನಂತರ ವಾಹನದ ಜೊತೆಗೆ ಫೋಟೋ ತೆಗೆದುಕೊಂಡು ಅದನ್ನು ಬ್ಯಾಂಕಿಗೆ ಹಾಜರ ಮಾಡಬೇಕಾಗಿತ್ತು ಅಂದರೆ ಸಾಕ್ಷಿ ಆ ಸಮಯದಲ್ಲಿ ಆ ರೀತಿ ಫೋಟೋ ಹಾಜರ ಪಡಿಸಬೇಕು ಎನ್ನುವ ನಿಯಮ ಇತ್ತು ಎನ್ನುವದು ನನಗೆ ಗೊತ್ತಿಲ್ಲ ಅನ್ನುತ್ತಾರೆ. ಖಾರು ಖರೀದಿಸಿದ ನಂತರ ಅದರ ಜೊತೆಗೆ ಫೋಟೋ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಭಾರತೀಯ ರಿಜರ್ವ ಬ್ಯಾಂಕ ನಿಯಮಾವಳಿ ಇದೆ ಅಂದರೆ ಸಾಕ್ಷಿ ಈಗ ಇರುತ್ತದೆ ಆಗ ಇರುವುದು ಗೊತ್ತಿಲ್ಲ ಅನ್ನುತ್ತಾರೆ. 2012 ರಿಂದ ನಿಯಮ ಇರುತ್ತದೆ ಅಂದರೆ ಸರಿಯಲ್ಲ. ಕಾರ ಜೊತೆಗೆ ಶೋರೋಂ ರವರು ನಮಗೆ ಒಂದು ಕೀ ನೀಡುತ್ತಾರೆ ಎನ್ನುವ ಬಗ್ಗೆ ನಿಯಮಾವಳಿ ಇರುತ್ತದೆ ಅಂದರೆ ಸರಿಯಲ್ಲ. ಅದೇ ರೀತಿ ನೋಂದಾಯಿತ ಪ್ರಮಾಣ ಪತ್ರವನ್ನು ಸಹ ಇಟ್ಟುಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ವಾಹನಕ್ಕೆ ಸಂಬಂಧಿಸಿದ ಯಾವುದೆ ದಾಖಲೆಗಳು ನಮ್ಮ ಬ್ಯಾಂಕಿನಲ್ಲಿ ಇಲ್ಲ ಎಂದರೆ ಸಾಕ್ಷಿ ದಾಖಲೆಗಳನ್ನು ಅವರು ಹಾಜರ ಪಡಿಸಿಲ್ಲ ಅನ್ನುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ಯಾವುದೆ ಸಾಲ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಆರೋಪಿತರು ಹಾಗೂ ಪ್ರಕರಣಕ್ಕೆ ಯಾವುದೆ ಸಂಬಂಧ ಇಲ್ಲದಿದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರಾಘವೇಂದ್ರ ಪಾಟೀಲ ಇವರು ಸಾಲ ಕೋರಿ ಯಾವುದೆ ಅರ್ಜಿ ಸಲ್ಲಿಸದಿದ್ದರೂ ಕೂಡಾ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ದೂರಿನೊಂದಿಗೆ ಹಾಜರ ಪಡಿಸಿದ ದಾಖಲೆಗಳು ಸುಳ್ಳು ಆಗಿರುತ್ತವೆ ಅಂದರೆ ಸರಿಯಲ್ಲ. ಸಾಲದ ಅರ್ಜಿ, ಆದಾಯ ತೆರಿಗೆ ಮರು ಪಾವತಿ ಹಾಗೂ ಇತರೆ ದಾಖಲೆಗಳಿಗೆ ಆರೋಪಿ ಸಹಿ ಮಾಡಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹಾಜರ ಪಡಿಸಿದ ದಾಖಲೆಗಳು ನಮ್ಮ ಬ್ಯಾಂಕಿನವರು ಸೃಷ್ಟಿಸಿದ ದಾಖಲೆಗಳು ಅಂದರೆ ಸರಿಯಲ್ಲ. ಖೊಟ್ಟಿ ದಾಖಲೆಗಳ ಮೇಲೆ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಅಂದರೆ ಸರಿಯಲ್ಲ.

(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ವಿಡಿಯೋ ಕಾಲ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿ ಸಹಿ ಇರುವುದಿಲ್ಲ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.